**ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು.**
**ಸ್ಪೇಷಲ್ ಕೇಸ್ ಸಂಖ್ಯೆ : 132/2017**

**ಚಾ.ಸಾ : 3    ಪ್ರಾ.ಸಾ : 4**

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 06.01.2023**

| | | |
|---|---|---|
| ಸಾಕ್ಷಿಯ ಹೆಸರು | : | ಗೌಸ್ ಮೋಹಿನುದ್ದಿನ್ |
| ತಂದೆಯ ಹೆಸರು | : | ಮಹೆಬೂಬ್ ಸಾಬ್ |
| ವಯಸ್ಸು | : | 65 ವರ್ಷ |
| ಉದ್ಯೋಗ | : | ನಿವೃತ್ತ ಪಂಚಾಯತಿ ಕಾರ್ಯದರ್ಶಿ |
| ವಿಳಾಸ | : | ಗಬ್ಬೂರ ತಾ.ದೇವದುರ್ಗ |

**ಮುಖ್ಯ ವಿಚಾರಣೆ : ಮಾನ್ಯ ವಿಶೇಷ ಸರ್ಕಾರಿ ಅಭೀಯೋಜಕರಿಂದ**

ಹೀರೆಬೂದನೂರು ಪಂಚಾಯತಿಗೆ ಒಳಪಟ್ಟು ಹಂಚಿನಾಳ ಗ್ರಾಮದ ಪಂಚಾಯತಿ ಬರುತ್ತದೆ. ನಾನು ದಿ.08.02.2012 ರಿಂದ 14.01.2013 ರವರೆಗೆ ಹೀರೆಬೂದನೂರು ಪಂಚಾಯತಿಯಲ್ಲಿ ಪ್ರಭಾರಿ ಪಿ.ಡಿ.ಓ ಎಂದು ಕೆಲಸ ಮಾಡಿರುತ್ತೇನೆ. ಸದರಿ ಹನುಮಂತಪ್ಪ ಪಿ.ಡಿ.ಓ ಇವರಿಂದ ನಾನು ಪ್ರಭಾರವನ್ನು ವಹಿಸಿಕೊಂಡಿದ್ದೆ. ನಾವು ಹಂಚಿನಾಳ ಗ್ರಾಮದ ಆಶ್ರಯ ಕಾಲೋನಿಯಲ್ಲಿ ರಸ್ತೆ ಅಭಿವೃದ್ದಿ ಬಗ್ಗೆ ಸ್ಥಳ ಪರಿಶೀಲೆ ಮಾಡಿದ್ದು, ಸದರಿ ಸ್ಥಳವನ್ನು ನಾನು ಮತ್ತು ಹಂಚಿನಾಳ ಗ್ರಾಮದ ಸದಸ್ಯ ತೋರಿಸಿರುತ್ತೇವೆ. ಅಲ್ಲಿ ರಸ್ತೆ ನಿರ್ಮಾಣ ಮಾಡಿದ ಕಾಮಗಾರಿ ಮಾಡಿದ ಜಾಗೆಯನ್ನು ಅಳತೆ ಮಾಡಿದ್ದು, ಅಳತೆ ಎಷ್ಟು ಇತ್ತು ಎಂದು ನನಗೆ ನೆನಪಿಲ್ಲ. ಅಳತೆ ಮಾಡಿದ್ದು ಅಳತೆಯು ನನಗೆ ಗೊತ್ತಿಲ್ಲ. ನಾನು ಕೇವಲ ಪಂಚನಾಮೆಗೆ ಸಹಿ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿ.ಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿ.ಪಿ-1(ಐ) ಎಂದು ಗುರುತಿಸಲಾಯಿತು.

ಸ್ಥಳ ಪರೀಶಿಲನೆ ಮಾಡುವಾಗ ತೆಗೆದ ಭಾವಚಿತ್ರಗಳಲ್ಲಿ ನಾನು ಇರುತ್ತದೆ. ಸದರಿ ಭಾವಚಿತ್ರಗಳನ್ನು ಈಗಾಗಲೇ ನಿ.ಪಿ-20 ಎಂದು ಗುರುತಿಸಲಾಗಿರುತ್ತದೆ.

ನಾನು ರಾಯಚೂರು ಲೋಕಾಯುಕ್ತ ಕಛೇರಿಗೆ ಒಂದು ಪತ್ರವನ್ನು ಬರೆದಿದ್ದು, ಸದರಿ ಪತ್ರ ವ್ಯವಹಾರದ ಮೂಲಕ ಈ ಹಿಂದೆ ಇದ್ದ ಹೀರೆಬೂದೂನು ಗ್ರಾಮ ಪಂಚಾಯತಿಯ ಅಭಿವೃದ್ದಿ ಅಧಿಕಾರಿ ಅವರು ಹೀರೆಬೂದೂನು ಗ್ರಾಮ ಪಂಚಾಯತಿಯ ಹಂಚಿನಾಳ ಗ್ರಾಮದ ಆಶ್ರಯ ಕಾಲೋನಿಯ ಕಾಮಗಾರಿ ಕೆಲಸದ ಕಡತಗಳನ್ನು ನನಗೆ ಪ್ರಭಾರ ವಹಿಸುವಾಗ ಕೊಟ್ಟಿರುವುದಿಲ್ಲ ಮತ್ತು ಸದರಿ ಕಡತಗಳು ಲಭ್ಯವಿರುವುದಿಲ್ಲ ಎಂದು ಪತ್ರ ಬರೆದಿರುತ್ತೇನೆ. ಸದರಿ ಪತ್ರವನ್ನು ನಿ.ಪಿ-24 ಎಂದು, ಸಾಕ್ಷಿ ಸಹಿಯನ್ನು ನಿ.ಪಿ-24(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶ: ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರು ಅನುಮತಿ ಕೇಳಿರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲು : ಮಾನ್ಯ ವಿಶೇಷ ಸರ್ಕಾರಿ ಅಭೀಯೋಜಕರಿಂದ**

ನನ್ನ ಸಮಕ್ಷಮ ವೆಂಕಟೇಶ ಗಲಗ, ಎಈಈ (ಚಾ.ಸಾ-40) ಇವರು ಅಲ್ಲಿ ಒಂದು ರಸ್ತೆ 150 ಮೀಟರ ಮತ್ತು ಮೂರು ರಸ್ತೆ 24 ಮೀಟರ್ ಹಾಗೂ ಒಂದು ರಸ್ತೆ 16 ಮೀಟರ, ಒಟ್ಟು 238 ಮೀಟರ್ ರಸ್ತೆ ಕಾಮಗಾರಿ ಆಗಿದ್ದು ಸ್ಥಳದಲ್ಲಿ ಇದ್ದದ್ದು ಚಾ.ಸಾ-40 ರವರು ಅಳತೆ ಮಾಡಿರುತ್ತಾರೆ ಎಂದರೆ ಸರಿ. ಎಸ್ಟಿಮೇಟ್ ಬುಕ್ಕಿನಲ್ಲಿ 580 ಮೀಟರ್ ಉದ್ದ ರಸ್ತೆ ನಿರ್ಮಾಣ ಮಾಡಬೇಕು ಎಂದು ಇತ್ತು ಎಂದು ಚಾ.ಸಾ-40 ರವರು ನನಗೆ ತಿಳಿಸಿ ಬುಕ್ಕನ್ನು ತೋರಿಸಿದರು ಎಂದರೆ ಸರಿ. ನಾನು ಉದ್ದೇಶಪೂರ್ವಕವಾಗಿ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ನಂ.2 ಪರ ಶ್ರೀ ಕೆ.ಡಿ.ಎನ್ ವಕೀಲರಿಂದ**

ನಾನು ಹೊಸದಾಗಿ ಹೀರೆಬೂದನೂರು ಗ್ರಾಮದ ಪಂಚಾಯತಿಯ ಪ್ರಭಾರ ವಹಿಸಿಕೊಂಡ ಮೇಲೆ ಯಾವುದೇ ಕಡತಗಳನ್ನು ನನಗೆ ವಹಿಸಿಕೊಟ್ಟಿರುವುದಿಲ್ಲ. ನನಗೆ ಲೋಕಾಯುಕ್ತ ಪೋಲಿಸರು ಮತ್ತು ಇಂಜಿನಿಯರ್ ಇವರು ಇರು ಎಂದು ಹೇಳಿದ್ದರಿಂದ ನಾನು ಸ್ಥಳದಲ್ಲಿ ಇದ್ದೆ. ನಾನು ಪಂಚಾಮೆ ಮಾಡಿದ ನಂತರ ಸಹಿ ಮಾಡಿರುತ್ತೇನೆ. ನನಗೆ ಸಂಪೂರ್ಣ ಕಾಮಗಾರಿ ಕೆಲಸ ಆದ ಬಗ್ಗೆ ಗೊತ್ತಿಲ್ಲ. ರಸ್ತೆಯನ್ನು ಅಳೆತೆ ಮಾಡಿದ ದಿನಾಂಕ ಮತ್ತು ಸಮಯ ನನಗೆ ನೆನಪಿಲ್ಲ. ಆ ವೇಳೆಯಲ್ಲಿ 6-7 ಜನ ಸೇರಿದ್ದೇವು, ಆದರೆ ಅವರ ಹೆಸರುಗಳು ನನಗೆ ಹೇಳಲು ಆಗುವುದಿಲ್ಲ. ವೆಂಕಟೇಶ ಇವರು ಸ್ಥಳಕ್ಕೆ ಬಂದಿರುತ್ತಾರೆ, ಆದರೆ ಅವರು ಸ್ಥಳಕ್ಕೆ ಬಂದ ಸಮಯ ಹೇಳಲು ಆಗುವುದಿಲ್ಲ. ನಾನು ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿ ನಂ.3 ಪರ ವಕೀಲರಿಂದ**

ನಾನು ಹೀರೆಬೂದನೂರು ಗ್ರಾಮದ ಪಂಚಾಯತಿಯ ಹಂಚಿನಾಳ ಗ್ರಾಮದಲ್ಲಿ ಮಾಡಿದ ಪಂಚನಾಮೆಗೆ ಮಾತ್ರ ಸಹಿ ಮಾಡಿರುತ್ತೇನೆ. ಹಂಚಿನಾಳ ಗ್ರಾಮದ ಆಶ್ರಯ ಕಾಲೋನಿಯಲ್ಲಿ ಮಾಡಿದ ಪಂಚನಾಮೆಗೆ ಮಾತ್ರ ಸಹಿ ಮಾಡಿರುತ್ತೇನೆ, ಆದರೆ ಉಳಿದ ಯಾವುದೇ ದಾಖಲೆಗಳಲ್ಲಿ ಸಹಿ ಮಾಡಿರುವುದಿಲ್ಲ.

ಕಾಮಗಾರಿ ಮಾಡಿದ ರಸ್ತೆ ನಿರ್ಮಾಣ ಮತ್ತು ಚಂರಂಡಿ ನಿರ್ಮಾಣ ಮಾಡಿದ ಜಾಗೆಯಲ್ಲಿ ಸಾರ್ವಜನಿಕರು ತಿಪ್ಪೆ ಕಸವನ್ನು ಮತ್ತು ದನಗಳಿಗೆ ಮೇಯಿಸುವ ಹುಲ್ಲಿನ ಬಣವೆಯನ್ನು ಹಾಕಿದ್ದರು.

ಈ ಹಂತದಲ್ಲಿ ಆರೋಪಿ ನಂ.5 ಮತ್ತು 6 ಪರ ವಕೀಲರು, ಆರೋಪಿ ನಂ.2 ಮತ್ತು 3 ರವರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳ ವಿನಂತಿಸಿದ್ದರಿಂದ ಅಳವಡಿಸಿಕೊಳ್ಳಲಾಯಿತು.

(ಈ ಹಂತದಲ್ಲಿ ಆರೋಪಿ ನಂ.4 ಪರ ವಕೀಲರು ಗೈರು ಹಾಜರಿದ್ದರಿಂದ ಪಾಟೀ ಸವಾಲು ಎನೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು)

**ಮರುವಿಚಾರಣೆ : ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ. ಇದೆ

ಎರಡನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು,
ರಾಯಚೂರು.